ಕೇಂದ್ರ ಸರ್ಕಾರ ಕೊಳಗೇರಿ ಅಭಿವೃದ್ಧಿಗಾಗಿ ಎಸ್.ಸಿ.ಪಿ. ಯೋಜನೆ ಅಡಿ ಬಿಡುಗಡೆ ಮಾಡಿರುವ ಹಣ.

145(449) ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 98-99 ರಲ್ಲಿ ಕೇಂದ್ರ ಸರ್ಕಾರ ಕೊಳಗೇರಿ ಅಭಿವೃದ್ಧಿಗಾಗಿ ಎಸ್.ಸಿ.ಪಿ. ಯೋಜನೆ ಅಡಿ ಬಿಡುಗಡೆ ಮಾಡಿರುವ ಹಣ ಎಷ್ಟು ಎಂದು ಬಿಡುಗಡೆ ಮಾಡಲಾಗಿದೆ.

ಆ) ಇದರಲ್ಲಿ ರಾಜ್ಯ ಸರ್ಕಾರ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಿದ ಹಣವೆಷ್ಟು? ಮತ್ತು ಎಂದು ಬಿಡುಗಡೆ ಮಾಡಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಕೇಂದ್ರ ಸರ್ಕಾರವು 1998-99ನೇ ಸಾಲಿನಲ್ಲಿ ಕೊಳಗೇರಿ ಅಭಿವೃದ್ಧಿಗಾಗಿ ಎಸ್.ಸಿ.ಪಿ. ಯೋಜನೆ ಅಡಿ ಮಂಡಳಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಸಾರಿಗೆ ಅದಾಲತ್.

146(178) ಶ್ರೀರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಸಾರಿಗೆ ಅದಾಲತ್‌ಗಳನ್ನು ನಡೆಸಲಾಗಿದೆ.

ಆ) ಈ ಅದಾಲತ್‌ಗಳಲ್ಲಿ ಬಂದ ಮನವಿಗಳೆಷ್ಟು ಹಾಗೂ ಅವುಗಳ ಪೈಕಿ ಎಷ್ಟು ಮನವಿಗಳನ್ನು ಪುರಸ್ಕರಿಸಲಾಯಿತು;

ಇ) ಈ ಸಾರಿಗೆ ಅದಾಲತ್‌ನಿಂದ ಹೊಸದಾಗಿ ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಹೆಚ್ಚುವರಿ ಬಸ್‌ಗಳನ್ನು ಓಡಿಸಲಾಗುತ್ತಿದೆ?

ಈ) ಈ ಅದಾಲತ್‌ಗಳಲ್ಲಿ ಬರತಕ್ಕ ಮನವಿಗಳ ಇತ್ಯರ್ಥಕ್ಕಾಗಿ ಪ್ರತ್ಯೇಕ ವಿಭಾಗವನ್ನು ತೆರೆಯಲಾಗಿದೆಯೇ?

ಶ್ರೀ ಬಿ.ಎಸ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಬೆಂಗಳೂರು ನಗರದ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳಲ್ಲಿ ಸಾರಿಗೆ ಆದಾಲತ್ ನಡೆಸಲಾಗಿದೆ.

1) ಜಯಮಹಲ್	2) ಶಾಂತಿನಗರ
3) ಭಾರತಿನಗರ	4) ರಾಜಾಜಿನಗರ
5) ಬಸವನಗುಡಿ	6) ಜಯನಗರ
7) ಉತ್ತರಹಳ್ಳಿ	

ಉಳಿದ ವಿಧಾನಸಭಾ ಕ್ಷೇತ್ರಗಳಲ್ಲಿ ಸಾರಿಗೆ ಆದಾಲತ್ ನಡೆಸಲು ಕಾರ್ಯಕ್ರಮವು ಜಾರಿಯಲ್ಲಿದೆ.

ಆ) ಈ ಆದಾಲತ್ ಗಳಲ್ಲಿ ಒಟ್ಟು 574 ಮನವಿಗಳನ್ನು ಸ್ವೀಕೃತವಾಗಿದ್ದು, 113 ಮನವಿಗಳನ್ನು ಪುರಸ್ಕರಿಸಲಾಗಿದೆ.

ಇ) ಈ ಕೆಳಕಂಡ ಕ್ಷೇತ್ರಗಳಿಗೆ ಮುಂದೆ ತೋರಿಸಿದಂತೆ ಬಸ್ಸುಗಳನ್ನು ಓಡಿಸಲಾಗಿದೆ.

1)	ಶಾಂತಿನಗರ	-	3
2)	ಜಯಮಹಲ್	-	4
3)	ಭಾರತಿನಗರ	-	2
4)	ರಾಜಾಜಿನಗರ	-	2
5)	ಬಸವನಗುಡಿ	-	2
6)	ಜಯನಗರ	-	2
7)	ಉತ್ತರಹಳ್ಳಿ	-	3

ಈ) ಹೌದು

ಬೆಂಗಳೂರಿನ ಲಾಲ್‌ಬಾಗ್ ಕೆರೆಯ ಅಭಿವೃದ್ಧಿ.

147(176) ಶ್ರೀರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಅರಣ್ಯ ಇಲಾಖೆ, ಲಾಲ್‌ಬಾಗ್ ಕೆರೆಯ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ 1995 ರಲ್ಲಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;